ಬಿದ್ದು ನರಳುತ್ತಿರುವುದು. ಆತನ ಮಗನೊಬ್ಬ ಅಡ್ಡದಾರಿ ಹಿಡಿದು ಉಂಡಾಡಿ ಪೋಲಿಯಾಗಿ ಅಲೆಯುತ್ತಿರುವುದು... ಭೂತ ಮತ್ತೂ ಇನ್ನೇನೋ ಹೇಳುತ್ತಲೇ ಇದೆ. ಮಾಯಿಲನ ಕುಟುಂಬದ ಬಗ್ಗೆ ತಿಳಿದಿರುವ ಊರವರಿಗೆಲ್ಲಾ ಕಲ್ಲುರ್ಟಿಯ ನೂರಕ್ಕೆ ನೂರು ಸತ್ಯ ಮಾತು ಕೇಳಿ ಎಲ್ಲರಲ್ಲೂ ಭಯ ಭಕ್ತಿ ಹೆಚ್ಚುತ್ತಲೇ ಇತ್ತು.

ಆದರೆ ಕೊಟ್ಟಿಗೆಯ ಬಾಗಿಲಲ್ಲಿ ಕೈಕಟ್ಟಿ ನಿಂತು ಭೂತದ ನುಡಿಕಟ್ಟುಗಳನ್ನು ಕೇಳಿಸುತ್ತಿದ್ದ ಕೃಷ್ಣಪ್ಪನಲ್ಲಿ ಮಾತ್ರ ದುಗ್ಗನ ಮೇಲೆ ರೋಷ ಕ್ಷಣದಿಂದ ಕ್ಷಣಕ್ಕೆ ಏರುತ್ತಲೇ ಇತ್ತು. ಮಾಯಿಲನ ಮುಗ್ಧತೆಯ ಬಗ್ಗೆಯೂ ಅವನಿಗೆ ಕನಿಕರ. ಉಕ್ಕಿ ಬರುವ ಸಿಟ್ಟನ್ನು ಅದುಮಿಡಲಾರದೆ ಅಲ್ಲಿಂದ ಕಾಲ್ಕಿತ್ತವನೇ ಅಲ್ಲೇ ಕಾಟು ಬಾದಾಮಿ ಮರದ ಕೆಳಗಡೆ ನಿಂತಿದ್ದ ಜಗ್ಗ, ಲಕ್ಷ್ಮಣ, ವಿಠಲರನ್ನು ಸೇರಿಕೊಂಡ. ಕೃಷ್ಣಪ್ಪನ ಈ ಗಟ್ಟಿಮುಟ್ಟು ಗೆಳೆಯರೆಲ್ಲರೂ ಪ್ರತಿವರ್ಷವೂ ಮಾಯಿಲನ ಮನೆಯ ಕೋಲದ ದಿನದಂದು ಬಾವಿಯ ಬಳಿ ಕಾದು ನಿಲ್ಲಬೇಕಿತ್ತು. ಕಲ್ಲುರ್ಟಿ ವಿಪರೀತ ಸಿಟ್ಟಿನಿಂದ, ಅಸಮಾಧಾನದಿಂದ ಪ್ರತೀವರ್ಷವೂ ಬಾವಿಗೆ ಹಾರ ಹೋಗುವ 'ಬುದ್ಧಿ' ತೋರಿಸುವುದರಿಂದ, ಭಯಪಟ್ಟ ಮಾಯಿಲ ಮೊದಲೇ ಆ ಬಗ್ಗೆ ಜಾಗೃತನಾಗುತ್ತಿದ್ದ. ನೆರೆಕೆರೆಯ ಹುಡುಗರನ್ನ ವಿನಂತಿಸಿ ಕರೆಸಿ ಬಾವಿ ಬಳಿ ನಿಲ್ಲಿಸಿಬಿಡುತ್ತಿದ್ದ ಭೂತವನ್ನು ಹಿಡಿದಿಡುವುದಕ್ಕಾಗಿ.

ಈ ದಿನವೂ ಮಾಯಿಲನ ವಿನಂತಿ ಮೇರೆಗೆ ಅವರೆಲ್ಲಾ ಬಂದಿದ್ದು, ಅದಕ್ಕಾಗಿಯೇ ಬಾವಿಯ ಎದುರಲ್ಲೇ ಇರುವ ಕಾಟುಬಾದಾಮಿಯ ಮರದೆದುರು ಕಾದಿದ್ದರು. ಇದೀಗ ಕೃಷ್ಣಪ್ಪನೊಡನೆ ಹರಟೆ ಹೊಡೆಯುತ್ತಾ ಭೂತದ ಆರ್ಭಟವನ್ನು ದಿಟ್ಟಿಸುತ್ತಿದ್ದರು. ಭೂತ ಮಾಯಿಲನ ಜತೆ ವಾದ ಮಾಡುತ್ತಿತ್ತು. ಆತನನ್ನು ಮಾತಿನಲ್ಲಿ ಸಿಲುಕಿಸುತ್ತಿತ್ತು. ಕೆರಳುತ್ತಿತ್ತು. ಸಿಟ್ಟಿನಿಂದ ದಬಕ್ಕನೆ ಹಾರಾಡಿ ಅಂಗಳವನ್ನಿಡೀ ಪುಡಿ ಮಾಡುತ್ತಿತ್ತು.

ಇದ್ದಕ್ಕಿದ್ದಂತೆ ಭೂತ ಮಾಯಿಲನಲ್ಲಿ ಕೋಳಿ ಕೇಳಿತು. ಇದನ್ನೇ ನಿರೀಕ್ಷಿಸುತ್ತಿದ್ದ ಮಾಯಿಲ ಅಲ್ಲೇ ಬಿಗಿದಿಟ್ಟಿದ್ದ ಕೋಳಿಯನ್ನು ಬಿಚ್ಚಿ ತರಲೆಂದು ಅಂಗಳದ ಮೂಲೆಗೆ ಬಂದು, ಬಿಚ್ಚಿ ಕೊಂಡೊಯ್ಯುವಷ್ಟರಲ್ಲಿ ಕಲ್ಲುರ್ಟಿಯ ಕೋಪ ಎಲ್ಲೆ ಮೀರಿತ್ತು, ಪ್ರತೀ ವರ್ಷದಂತೆ ಈ ಬಾರಿಯೂ ಭೂತ, ಅಸಹನೆ ಕೋಪದಿಂದ ರಭಸದಿಂದ ಬಾವಿಗೆ ಹಾರಲು ಓಡಿ ಹೋಗಿಯಾಗಿತ್ತು. ಅಂಗಳವಿಡೀ ಅಲ್ಲೋಲಕಲ್ಲೋಲ. ಎಚ್ಚರವಿದ್ದು ಭೂತದ ಹಾರಾಟ ನೋಡಲು ಕುಳಿತಿದ್ದವರೆಲ್ಲಾ ಎದ್ದು ಭೂತದ ಹಿಂದೆಯೇ ಓಡಲಾರಂಭಿಸಿದ್ದರು. ನಿದ್ದೆಯಿಂದ ತೂಕಡಿಸುತ್ತಿದ್ದವರು ಯಾವುದೇ ಆಗುಹೋಗುಗಳ ಪರಿವೆಯಿಲ್ಲದೆ ತೂಕಡಿಸುತ್ತಲೇ ಇದ್ದರು. ಮಾಯಿಲನಿಗೆ ಅಂಗಳದಲ್ಲಿ ನಿಂತಲ್ಲಿಂದ ಕದಲಾಗುತ್ತಿಲ್ಲ. ಯಾರೋ ಆತನ ಕೈಕಾಲುಗಳನ್ನ ಬಿಗಿಯಾಗಿ ಹಿಡಿದಿಟ್ಟಿರುವಂತಹ ಅನುಭವ. ಕೈಯಲ್ಲಿ ಕೋಳಿ ಹಿಡಿದುಕೊಂಡವ, ಹಿಡಿದೇ ನಿಂತಿದ್ದ... ನಿಶ್ಚಲನಾಗಿ.

ಬಾವಿ ಬಳಿ ಹೋದ ಭೂತವನ್ನು ಅರ್ಧದಾರಿಯಲ್ಲಿ ಹಿಡಿದಿಡುವವರು ಯಾರು ಇಲ್ಲ, ಕೃಷ್ಣಪ್ಪನ ಸ್ನೇಹಿತರು ಹಟ್ಟಿಯೊಳಗಡೆ ಶರಾಬಿನ ಬಾಟಲುಗಳನ್ನು ಖಾಲಿ ಮಾಡುತ್ತಿದ್ದರು. ಕೃಷ್ಣಪ್ಪ ಗೆಳೆಯರನ್ನು ಒತ್ತಾಯದಿಂದ ಹಟ್ಟಿಯೊಳಗಡೆ ಎಳೆದೊಯ್ದಿದ್ದ. ಭೂತ ವೀರಾವೇಶದಿಂದ ಬಾವಿಯ ಅಂಚಿನವರೆಗೂ ಭಾರೀ ರಭಸದಿಂದ ಓಡಿ ಇನ್ನೇನು ಅಂಚು ಕಂಡೊಡನೆ 'ನಿಂತುಬಿಡಬೇಕು' ಎಂದು ನಿಲ್ಲಲು ಪ್ರಯತ್ನಿಸುವಷ್ಟರಲ್ಲಿ ಆಯತಪ್ಪಿ ಬಾವಿಗೆ ಬಿದ್ದೇಬಿಟ್ಟಿತ್ತು.

ಹೆಣ್ಣುಭೂತ ಬೇರೆ, ಸೀರೆಯ ನೆರಿಗೆ ಕಾಲಿಗೆ ತೊಡರುತ್ತಿದೆ; ಭೂತ ನೆಲ ಕಚ್ಚುತ್ತಿದೆ. ಬಾವಿಯ ಮೇಲ್ಗಡೆ ಹಾಹಾಕಾರವೆದ್ದಿದೆ. ಮಾಚು ಪಾಡ್ದನ ಹಾಡುವವಳು ಬಾಯ್ಕೊಟ್ಟು ಅಳುತ್ತಿದ್ದಾಳೆ. ಮಾಯಿಲ ಕುಸಿದು ಬಿದ್ದಿದ್ದಾನೆ. ಅಂಗಳದಲ್ಲಿ ತೂಕಡಿಸುತ್ತಿದ್ದವರಲ್ಲಿ ಕಟ್ಟಲಚ್ಚಿಲು